

ಯಾವುದೇ ತೊಡಕಾದರೂ ತನ್ನ ಬಳಿ ಹೇಳಿ, ಕೇಳಿ ಮಾಡುತ್ತಿದ್ದ ಪೋರ ಯಾವುದೋ ಹಠಾತ್ತನೆ ಎದುರಾದ ಕ್ಷೋಭೆಗೆ ಒಳಗಾಗಿದ್ದಾನೆ ಅನ್ನುವದು ನಿಚ್ಚಳವಾಗಿತ್ತು. ಬದುಕಿನಲ್ಲಿ ಇಂಥದನ್ನು ಕಾಣುತ್ತಲೇ ಬಂದ ಆತ, 'ಬಾ, ಚಾ ಕುಡಿದು ಬರೋಣ, ಎಲ್ಲ ಸರಿಯಾಗ್ತದೆ' ಎನ್ನುವ ಸಮಾಧಾನದ ಮಾತು ಹೇಳಿದರೂ, 'ನಂಗೆ ಬೇಡ ಅನ್ನಿಸ್ತದೆ. ನೀ ಕುಡಿದು ಬಾ ಮಾಮಾ' ಎಂದ. ಹೆಚ್ಚು ಜುಲುಮೆ ಬೇಡ, ನಿಧಾನಕ್ಕೆ ಸುಧಾರಿಸಿಕೊಳ್ಳಲಿ ಎಂದುಕೊಂಡ ಬಾಬಣ್ಣ ಮತ್ತೇನೂ ಹೇಳದೇ ತೆರಳಿದ.

ಮನೋಹರ ಸುಮಾರು ಹತ್ತುವರ್ಷದವನಿದ್ದಾಗಲೇ ಆತನ ಅಪ್ಪ ಅಪಘಾತವೊಂದರಲ್ಲಿ ತೀರಿಕೊಂಡಿದ್ದ. ಶೆಟ್ಟಿ ಕಂಟ್ರಾಕ್ಟರ್ ಬಳಿ ಲಾರಿ ಡ್ರೈವರ್ ಆಗಿದ್ದ ನೀಲಕಂಠ ನಿಯತ್ತಿನ ಮನುಷ್ಯ ಎಂದೇ ಹೆಸರಾಗಿದ್ದ. ಅವನಂಥ ಶ್ರಮಜೀವಿಗಳು ಸುಲಭಕ್ಕೆ ಒಳಗಾಗುವ ಸಾರಾಯಿ, ಬೀಡಿ, ಸಿಗರೇಟಿನಂಥ ಯಾವ ವ್ಯಸನವೂ ಅವನಿಗಿರಲಿಲ್ಲ. ಹೆಂಡತಿ, ಮಕ್ಕಳೆಂದರೆ ತುಂಬು ಮನಸ್ಸಿನ ಪ್ರೀತಿ. ಕಡಿಮೆ ಪಗಾರಿನಲ್ಲೂ ಕುಟುಂಬವನ್ನ ಆದರದಿಂದ ಸಲಹುತ್ತಿದ್ದ. ದುಡ್ಡು ಕಿಸೆಯಲ್ಲಿದ್ದಾಗ ಹೆಂಡತಿ ಸಾವಿತ್ರಿಗೆ ಮಲ್ಲಿಗೆ ದಂಡೆ, ಮನೋಹರ, ಆತನ ತಂಗಿಗೆ ಮಿಠಾಯಿ ತಂದೇ ತರುತ್ತಿದ್ದ. ಮನೋಹರನ ಅಮ್ಮ ಸಾವಿತ್ರಿಯೂ ಅಷ್ಟೇ. ಆ ಊರಿನಲ್ಲಿ ಯಾವ ಹೆಣ್ಣುಮಕ್ಕಳ ಬಾಣಂತನಕ್ಕೂ ಈಕೆಯೇ ಆಗಬೇಕು. ಹೆರಿಗೆ ನಂತರದ ಎರಡು, ಮೂರು ತಿಂಗಳ ಕಾಲ ಬಾಣಂತಿಗೆ, ಆಕೆಯ ಮಗುವಿಗೆ ಸ್ನಾನ, ಶುಶ್ರೂಷೆ ಸಾವಿತ್ರಿಯಿಂದಾಗದಿದ್ದರೆ ಆ ಬಾಣಂತಿಯ ಹೆತ್ತವರಿಗೆ ಸಮಾಧಾನವಿಲ್ಲ. ಆ ಕೆಲಸದಲ್ಲಿ ಅಷ್ಟೊಂದು ಕುಶಲತೆ ಅವಳದ್ದು. ಅದಕ್ಕಿಂತ ಮಿಗಿಲಾಗಿ ಜಾತಿ, ಅಂತಸ್ತು ನೋಡದೇ ಆ ಬಾಣಂತಿ, ಶಿಶು ತನ್ನ ಮಕ್ಕಳೆಂಬಂತೆ ತೋರಿಸುವ ವಾತ್ಸಲ್ಯ ಅಪರೂಪದ್ದಾಗಿತ್ತು. ಕೆಲವೊಮ್ಮೆ ದಿನಕ್ಕೆ ನಾಲ್ಕಾರು ಬಾಣಂತಿಯರ ಕೆಲಸ ಮಾಡಿ ದಣಿಯುತ್ತಿದ್ದಳು. ಅಷ್ಟಾದರೂ ತನ್ನ ಕೆಲಸಕ್ಕೆ ಇಷ್ಟೇ ಎನ್ನುವ ಪಗಾರ ನಿಕ್ಕಿ ಮಾಡದೇ, ಅವರು ಕೊಟ್ಟಷ್ಟಕ್ಕೆ ಸೈ ಎನ್ನುವ ಸ್ವಭಾವದವಳು. ಎಷ್ಟೋ ಬಾರಿ ತಮ್ಮ ಮಗಳು ಗರ್ಭಿಣಿ ಎಂದು ತಿಳಿದಾಕ್ಷಣವೇ ಕೆಲವರು ಸಾವಿತ್ರಿಗೆ ಹೇಳಿಟ್ಟಿರುತ್ತಿದ್ದರು. ಅದನ್ನೊಂದು ದೇವರ ಕೆಲಸ ಎಂದೇ ತಿಳಿದಿದ್ದ ಸಾವಿತ್ರಿಗೆ ಊರಲ್ಲೆಲ್ಲ ಅಕ್ಕರೆಯಿತ್ತು.